ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)
**ಪೊಲೀಸ್ ತರಬೇತಿ ಮಹಾವಿದ್ಯಾಲಯ**
ನಾಗನಹಳ್ಳಿ, ಕಲಬುರಗಿ–585802.
ದೂರವಾಣಿ ಸಂ: 08472–298321 / 298323
ಇ–ಮೇಲ್ ವಿಳಾಸ : ptcgba@ksp.gov.in

ಸಂಖ್ಯೆ: ಸಿಬಿ/ಎಪಿಆರ್/4/2022

09.02.2022.

# ಜ್ಞಾಪನ

**ವಿಷಯ:** ಪಿ.ಟಿ.ಸಿ. ಕಲಬುರಗಿ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಡಿಸೆಂಬರ್ 31ಕ್ಕೆ ಅಂತ್ಯಗೊಳ್ಳುವ ತನ್ನ ಮತ್ತು ತನ್ನ ಕುಟುಂಬದ ಎಲ್ಲಾ ಸದಸ್ಯರ ಆಸ್ತಿಗಳ / ಹೊಣೆಗಾರಿಕೆಗಳ ವಾರ್ಷಿಕ ವಿವರಗಳನ್ನು ಸಲ್ಲಿಸುವ ಕುರಿತು.

**ಉಲ್ಲೇಖ:**
1) ಸರ್ಕಾರದ ಅಧೀಸೂಚನೆ ಸಂಖ್ಯೆ: ಸಿಆಸುಇ 12/ಸೆನಿಸಿ/2019, ಬೆಂಗಳೂರು ದಿನಾಂಕ: 07.01.2021.
2) ಪೊಲೀಸ್ ಪ್ರಧಾನ ಕಚೇರಿ ಸಂದೇಶ ಸಂಖ್ಯೆ: ಎನ್‌ಜಿಓ/ಎಸಿಆರ್/03 2018–19 ದಿನಾಂಕ: 22.06.2021.
3) ಈ ಕಛೇರಿ ಜ್ಞಾಪನ ಸಂ: ಸಿಬಿ/ಎಸಿಆರ್/4/2021, ದಿನಾಂಕ: 07.12.2021.
4) ಸರ್ಕಾರದ ಸುತ್ತೋಲೆ ಸಂ:ಸಿಆಸುಇ/90/ಸೇವಿಸಿ/2014 ದಿ: 01.08.2015.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಅಧೀಸೂಚನೆ ಮತ್ತು ಪೊಲೀಸ್ ಪ್ರಧಾನ ಕಛೇರಿ ಇಮೇಲ್ ಸಂದೇಶ ದಲ್ಲಿ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 2021 ರ ನಿಯಮ 24 ರಲ್ಲಿ ಸರ್ಕಾರಿ ನೌಕರರು ಡಿಸೆಂಬರ್ 31ಕ್ಕೆ ಅಂತ್ಯಗೊಳ್ಳುವ ಪ್ರತಿ ಹನ್ನೆರಡು ತಿಂಗಳಿಗೊಮ್ಮೆ ತನ್ನ ಮತ್ತು ತನ್ನ ಕುಟುಂಬದ ಎಲ್ಲಾ ಸದಸ್ಯರ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಾರ್ಷಿಕ ವಿವರಗಳ ಬಗ್ಗೆ ಪೂರ್ಣ ವಿವರಗಳನ್ನು ಒಳಗೊಂಡಂತೆ ಸರ್ಕಾರವು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಆದ್ದರಿಂದ ಉಲ್ಲೇಖ (3)ರಲ್ಲಿ ಪೊಲೀಸ್ ತರಬೇತಿ ಮಹಾವಿದ್ಯಾಲಯ, ಕಲಬುರಗಿ ಘಟಕದಲ್ಲಿ ಕರ್ತವ್ಯ ನಿರ್ವಹಿಸಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿ/ಲಿಪಿಕಸಿಬ್ಬಂದಿಯವರು ಡಿಸೆಂಬರ್ 31ಕ್ಕೆ ಅಂತ್ಯಗೊಳ್ಳುವ ಪ್ರತಿ ಹನ್ನೆರಡು ತಿಂಗಳಿಗೊಮ್ಮೆ ತನ್ನ ಮತ್ತು ತನ್ನ ಕುಟುಂಬದ ಎಲ್ಲಾ ಸದಸ್ಯರ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಾರ್ಷಿಕ ವಿವರ ಪಟ್ಟಿಯನ್ನು ಪೂರ್ಣ ವಿವರಗಳನ್ನು ಒಳಗೊಂಡಂತೆ ಸರ್ಕಾರವು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಲಾಗಿತ್ತು, ಆದರೆ ಈ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ/ಲಿಪಿಕ ಸಿಬ್ಬಂದಿಯವರ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಾರ್ಷಿಕ ವಿವರ ಪಟ್ಟಿಯನ್ನು ಇಲ್ಲಿಯವರೆಗೆ ಈ ಕಛೇರಿಯಲ್ಲಿ ಸ್ವೀಕೃತಿಗೊಂಡಿರುವುದಿಲ್ಲ.

ಉಲ್ಲೇಖ (4)ರ ಸರ್ಕಾರದ ಸುತ್ತೋಲೆಯನ್ವಯ ಸಮೂಹ 'ಡಿ' ದಜೆ ಸರ್ಕಾರಿ ನೌಕರರು ಆಸ್ತಿ ಮತ್ತು ಹೊಣೆಗಾರಿಕೆ ವಿವರ ಪಟ್ಟಿಕೆಯನ್ನು ಸಲ್ಲಿಸಲು ನೀಡಿದ್ದ ವಿನಾಯಿತಿಯನ್ನು ತೆರವುಗೊಳಿಸಿದೆ. ಆದ್ದರಿಂದ ಈ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಮೂಹ 'ಡಿ' ದರ್ಜೆಯ ಅನುಯಾಯಿ ಸಿಬ್ಬಂದಿಯವರು ಒಳಗೊಂಡಂತೆ ಎಲ್ಲಾ ಅಧಿಕಾರಿ ಸಿಬ್ಬಂದಿಯವರು ತನ್ನ ಮತ್ತು ತನ್ನ ಕುಟುಂಬದ ಎಲ್ಲಾ ಸದಸ್ಯರ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಾರ್ಷಿಕ ವಿವರ ಪಟ್ಟಿಯನ್ನು ಪೂರ್ಣ ವಿವರಗಳನ್ನು ಒಳಗೊಂಡಂತೆ ಸರ್ಕಾರವು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಎಸ್.ಪಿ ಮತ್ತು ಪ್ರಾಂಶುಪಾಲರು,
ಪಿ.ಟಿ.ಸಿ. ಕಲಬುರಗಿ.

ಗೆ,

1) ಡಿ.ವೈ.ಎಸ್.ಪಿ. (ಒಳಾಂಗಣ/ಹೊರಾಂಗಣ), ಪಿ.ಟಿ.ಸಿ. ಕಲಬುರಗಿ.
2) ಎಲ್ಲಾ ಪಿ.ಐ./ಆರ್.ಪಿ.ಐ. ಪಿ.ಟಿ.ಸಿ. ಕಲಬುರಗಿ.
3) ಎಲ್ಲಾ ಪಿ.ಎಸ್.ಐ./ಆರ್.ಎಸ್.ಐ., ಪಿ.ಟಿ.ಸಿ. ಕಲಬುರಗಿ.
4) ಅನುಯಾಯಿ ಮೇಲ್ವಿಚಾರಕರು, ಪಿ.ಟಿ.ಸಿ. ಕಲಬುರಗಿ.

<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>- ಸಹಾಯಕ ಆಡಳಿತಾಧಿಕಾರಿಗಳು, ಪಿ.ಟಿ.ಸಿ. ಕಲಬುರಗಿ.

<u>ಪ್ರತಿಯನ್ನು ಮಾಹಿತಿಗಾಗಿ</u> : ಸೂಚನಾ ಫಲಕಕ್ಕೆ